**ದಿನಾಂಕಃ 23.07.2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣವಚನ ಬೋಧಿಸಲಾಯಿತು.**

ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ ಟಿ ಎಸ್ ಆರ್ ವಕೀಲರಿಂದಃ

ದಾವಾ ಸ್ವತ್ತನ್ನು ಪ್ರತಿವಾದಿ 3 ರವರಿಂದ ನನ್ನ ಹೆಂಡತಿ ವಿಜಯಕೂಮಾರಿ (ಪ್ರತಿವಾದಿ 1) ರವರು ಖರೀದಿ ಮಾಡಿದ್ದರು. ಪ್ರತಿವಾದಿ 3 ರವರಿಗೆ ಅರಣಕುಮಾರ (ಪ್ರತಿವಾದಿ 5) ದಾವಾ ಸ್ವತ್ತು ಬಂದಿತ್ತು. ಅರಣಕುಮಾರ (ಪ್ರತಿವಾದಿ 5) ರವರಿಗೆ ಅವರ ತಂದೆ ರಾಜು ರವರಿಂದ ದಾವಾ ಸ್ವತ್ತು ಬಂದಿತ್ತು. ದಿಃ15.03.2016 ರಲ್ಲಿ ದಾವಾ ಸ್ವತ್ತಿನ ಸ್ವಾಧೀನ ಪಡೆದುಕೊಂಡಿದ್ದೇವು. ದಾವೆಯ ವಿಷಯಗಳನ್ನು ನಾನು ಓದಿ ತಿಳಿದುಕೊಂಡಿದ್ದೇನೆ. ಪ್ರತಿವಾದಿ 3 ರವರಿಗೆ ಅವರ ಅಣ್ಣ ಅನೀಲಕುಮಾರಿಂದ ಪ್ರತಿವಾದಿ 4 ಬಂದು ಅವರ ತಂದೆಯಿಂದ ಅನೀಲಕುಮಾರನಿಗೆ ಬಂದಿತ್ತು. ಅನೀಲಕುಮಾರ (ಪ್ರತಿವಾದಿ 4 )ರವರಿಗೆ ವಿಲ್ ಯಾ ಮರಣಶಾಸನ ಮೂಖಾಂತರ ಅವರ ತಂದೆಗೆ ಬಂದಿತ್ತು. ವಿಜಯೆಂದ್ರ ರಾಜ ಅನೀಲ ಕುಮಾರ ತಂದೆಯವರು (ಪ್ರತಿವಾದಿ 4)ಅನೀಲಕುಮಾರವರಿಗೆ ಯಾವಾಗ ವಿಲ್ ಯಾ ಮರಣ ಶಾಸನ ಬರೆದಿದ್ದರು ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಓದಿದ್ದೆ ಆಗ ಈಗ ಮರೆತ್ತಿದ್ದೇನೆ. (ಪ್ರತಿವಾದಿ 4)ಅನೀಲಕುಮಾರ ವಿಲ್ ಯಾ ಮರಣ ಶಾಸನ ಯಿಂದ ದಾವಾ ಸ್ವತ್ತು ಬಂದ ನಂತರ ಅವನ ತಮ್ಮ ಅರುಣಕುಮಾರ (ಪ್ರತಿವಾದಿ 5) ರವರಿಗೆ ಕೊಟ್ಟರು.

ಯಾವಾಗ ಎಂದು ದಿನಾಂಕ ನನಗೆ ಗೊತ್ತಿಲ್ಲ. ದಿಃ21.01.2013 ರಂದು ದಾನ ಪತ್ರದ ಮೂಲಕ (ಪ್ರತಿವಾದಿ 4)ಅನೀಲಕುಮಾರ ರವರು ಅರಣಕುಮಾರ (ಪ್ರತಿವಾದಿ 5) ರವರಿಗೆ ನಿಡಿ-21 ರಂತೆ ಕೊಟ್ಟಿದ್ದರು ಎಂದರೆ ಸರಿ. ದಿಃ17.03.2015 ರಲ್ಲಿ ಅರಣಕುಮಾರ (ಪ್ರತಿವಾದಿ 5) ರವರು ವಿಜಯಕುಮಾರವರಿಗೆ ನಿಡಿ-25 ರ ಪ್ರಕಾರ ಮಾರಾಟ ಮಾಡಿದ್ದರು ಎಂದರೆ ಸರಿ. ವಿಜಯಕುಮಾರವರು ದಾವಾ ಆಸ್ತಿಯನ್ನು ಯಾರಿಗೂ ಮಾರಾಟ ಮಾಡಿಲ್ಲ. ಅಂದರೆ ದಾವಾ ಸ್ವತ್ತು ವಿಜಯಕುಮಾರವರ ಬಳಿ ಉಳಿದಿದೆ ಎಂದರೆ ಸರಿಯಲ್ಲ. ದಿಃ15.03.2016 ರಲ್ಲಿ ನಿಡಿ-27 ರ ಪ್ರಕಾರ ವಿಜಯಕುಮಾರವರು ವಿಜಯಕುಮಾರಿಯವರಿಗೆ ದಾವಾ ಸ್ವತ್ತನ್ನು ಮಾರಾಟ ಮಾಡಿದ್ದರು ಎಂದರೆ ಸರಿ. ದಾವಾ ಆಸ್ತಿಗೆ ಸಂಬಂಧಪಟ್ಟ ಎಲ್ಲಾ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೇವು. ವಿಜಯಕುಮಾರವರಿಂದ ಬ್ಯಾಂಕನವರು ಬಂದು ಎಲ್ಲಾ ದಾಖಲೆಗಳನ್ನು ತೆಗೆದುಕೊಂಡು ಹೋಗಿದ್ದರು.ವಿಜಯಕುಮಾರವರು ಪ್ರತಿವಾದಿ 3 ಮಾರಾಟ ಮಾಡುವಾಗ ದಿಃ14.02.1992 ರಲ್ಲಾದ ವಿಲ್ ಯಾ ಮರಣ ಶಾಸನ ಪ್ರತಿಯನ್ನು ನಮಗೆ ಕೊಟ್ಟಿರಬಹುದು. ದಿಃ14.02.1992 ರಲ್ಲಾದ ವಿಲ್ ಯಾ ಮರಣ ಶಾಸನದ ಬಗ್ಗೆ ನಿಮಗೆ ಮಾಹಿತಿ ಇದೇಯೆ ಎಂದರೆ ಬ್ಯಾಂಕನವರು ಪಡೆದುಕೊಂಡು ಹೋಗಿದ್ದರು ನನಗೆ ಮಾಹಿತಿ ಇಲ್ಲ. ನಾನು ನನಗೆ ಮಾರಾಟ ಮಾಡಿದ

ವಿಜಯಕುಮಾರ( ಪ್ರತಿವಾದಿ 3) ರವರೊಂದಿಗೆ ದಿಃ14.02.1992 ರಲ್ಲಾದ ವಿಲ್ ಯಾ ಮರಣ ಶಾಸನದ ಬಗ್ಗೆ ಚರ್ಚೆ ಮಾಡಿಲ್ಲ. ದಿಃ14.02.1992 ರಲ್ಲಿ ಲೇಟ ವಿಜೆಯೆಂದ್ರ ರಾಜರವರು ವಿಲ್ ಯಾ ಮರಣ ಶಾಸನ ಬರೆದಿಲ್ಲ ಎಂದರೆ ಸರಿಯಲ್ಲ. ವಿಲ್ ಯಾ ಮರಣ ಶಾಸನ ಯಾವ ದಿನದಂದು ಬರೆದಿದ್ದರು, ಯಾರು ಬರೆದಿದ್ದರು ಎಂದು ಸಾಕ್ಷಿದಾರರು ಯಾರು ಎಂದು ಹೇಳಲು ನನಗೆ ಗೊತ್ತಿಲ್ಲ. ವಿಲ್ ಯಾ ಮರಣ ಶಾಸನ ಈಗ ನಮ್ಮ ಸುಭರ್ದನೆಯಲ್ಲಿ ಇಲ್ಲ.

ದಾವಾ ಸ್ವತ್ತು ದಿಃ02.11.1995 ರಲ್ಲಿ ವಾದಿಗೆ ನೊಂದಾಯಿತ ಕ್ರಯ ಪತ್ರದ ಮೂಲಕ ಬಂದಿತ್ತು ಎಂದರೆ ನನಗೆ ಗೊತ್ತಿಲ್ಲ. ನಾನು ದಾವಾ ಸ್ವತ್ತನ್ನು ಖರೀದಿ ಮಾಡುವಾಗ ಋಣಭಾರ ಪತ್ರವನ್ನು ಪರಿಶೀಲನೆ ಮಾಡಿದ್ದೆ. ಸಾಕ್ಷಿ ಈಗಾಗಲೆ ಗುರುತಿಸಲಾಗಿರುವ ನಿಪಿ-4 ಋಣ ಭಾರಪತ್ರವನ್ನು ಪರಿಶೀಲಿಸಿ ಮೂರ್ತಿ ಎಂಬು ವರಿಂದ ವಾದಿ ಮದನಿ ರಾಮಯ್ಯ ಚೌದ್ರಿಯವರಿಗೆ ಕ್ರಯ ಆಗಿರುವುದು ಎಂದು ಕಂಡಬರುತ್ತದೆ ಎಂದು ಹೇಳಿರುತ್ತಾರೆ. ಈಗಾಗಲೆ ಗುರುತಿಸಲಾಗಿರುವ ನಿಪಿ-1 ದಾವಾ ಸ್ವತ್ತಿಗೆ ಸಂಬಂಧ ಪಟ್ಟ ಕ್ರಯ ಪತ್ರ ಎಂದರೆ ಸಾಕ್ಷಿ ನಿಪಿ-1 ನ್ನು ಪರಿಶೀಲಿಸಿ ಹೌದು ಎಂದು ಹೇಳಿರುತ್ತಾರೆ. ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ಋಣ ಭಾರಪತ್ರನ್ನು ತೆಗೆದುಕೊಂಡಿದ್ದರೆ ನನಗೆ ವಾದಿ ಮದನಿ ರಾಮಯ್ಯ ಚೌದ್ರಿ 1995 ರಲ್ಲೆ ದಾವಾ ಸ್ವತನ್ನು ಖೀರಿದಿ ಮಾಡಿರುವ ವಿಷಯ ಗೊತ್ತಾಗುತ್ತಿತ್ತು ಎಂದರೆ ಸರಿ. ದಿಃ02.11.1995 ರಲ್ಲಿ ವಾದಿ ಮದನಿ ರಾಮಯ್ಯ ಚೌದ್ರಿ ನಿಪಿ-1 ಕ್ರಯ ಪತ್ರದ ಮುಖಾಂತರ ಮಾಲೀಕತ್ವ ಮತ್ತು ಸ್ವಾ ಧೀನ ಹೊಂದಿದ್ದಾರೆ ಎಂದರೆ ಅದರ ಬಗ್ಗೆ

ನನಗೆ ಗೊತ್ತಿಲ್ಲ. ಸಾಕ್ಷಿ ಮುಂದುವರೆದು ಸ್ವತ್ತಿನ ಸ್ವಾಧೀನದಲ್ಲಿ ನಾವೆ ಇದ್ದೇವೆ. ದಿಃ02.11.1995 ರಿಂದ ದಿಃ02.04.2015 ರವರೆಗೆ ವಾದಿ ಮದನಿ ರಾಮಯ್ಯ ಚೌದ್ರಿ ಸ್ವತ್ತಿನ ಸ್ವಾಧೀನದಲ್ಲೆ ಇದ್ದರು ಎಂದರೆ ನನಗೆ ಗೊತ್ತಿಲ್ಲ.

(ಪ್ರತಿವಾದಿ 4)ಅನೀಲಕುಮಾರವರು ವಾದಿ ಮದನಿ ರಾಮಯ್ಯ ಚೌದ್ರಿ ದಿಃ02.04.2015 ರಂದು ಅವರ ತೋಳು ಬಲ ಉಪಯೋಗಿಸಿಕೊಂಡು ಸ್ವತ್ತಿನಿಂದ ಹೋರ ಹಾಕಿದ್ದರು ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತನ್ನು ಮಾರಾಟ ಮಾಡಲು ವಿಜಯಕುಮಾರ( ಪ್ರತಿವಾದಿ 3) ರವರಿಗೆ ಯಾವುದೆ ಹಕ್ಕು ಇರಲಿಲ್ಲ ಎಂದರೆ ನನಗೆ ಗೊತ್ತಿಲ್ಲ. ದಿಃ14.12.1992 ರಲ್ಲಿ (ಪ್ರತಿವಾದಿ 4)ಅನೀಲಕುಮಾರ ವಿಲ್ ಯಾ ಮರಣ ಶಾಸನವನ್ನು ಸೃಷ್ಟಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಸದರಿ ವಿಲ್ ಯಾ ಮರಣ ಶಾಸನವನ್ನು ಮೋಸದ ದಾಖಲೆಯ ಮೇಲೆ ದಾನ ಪತ್ರ ಮತ್ತು ಕ್ರಯ ಪತ್ರಗಳನ್ನು ಸೃಷ್ಟಿಸಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. 1995 ರಿಂದ 2015 ರವರೆಗೂ ಖಾತಾ-ಕಂದಾಯಗಳು ವಾದಿಯ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಿಃ02.11.1995 ರ ಪೂರ್ವದಲ್ಲಿ ಖಾತಾ-ಕಂದಾಯ ಪಿ ಮೂರ್ತಿ ವಾದಿಗೆ ಮಾರಾಟ ಮಾಡಿದವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ದಾವಾ ಆಸ್ತಿ 2001-2002 ರಲ್ಲಿ ನಿಪಿ-10 ರ ಪ್ರಕಾರ ವಾದಿ ಮದನಿ ರಾಮಯ್ಯ ಚೌದ್ರಿ ರವರ ಹೆಸರಿನಲ್ಲಿ ಇತ್ತು. ನಿಪಿ-9 ರ ಪ್ರಕಾರ ದಾವಾ ಆಸ್ತಿ ವಾದಿಗೆ ಮಾರಾಟ ಮಾಡಿದವರಾದ ಪಿ ಮೂರ್ತಿ ರವರ ಹೆಸರಿನಲ್ಲಿ ಇತ್ತು ಎಂದು ಸಾಕ್ಷಿ ನಿಪಿ-9

ದಾಖಲೆಯನ್ನು ನೋಡಿ ಹೇಳಿದ್ದರು. ನಿಪಿ-11 ರಲ್ಲಿ ವಾದಿಗೇ ಮಾರಾಟ ಮಾಡಿದ ಪಿ ಮೂರ್ತಿ ರವರ ಹೆಸರಿನಲ್ಲಿ ಕಂದಾಯ ಕಟ್ಟಿದ್ದಾರೆ . ನಿಪಿ-12 ಮತ್ತು 13 ರ ಪ್ರಕಾರ ವಾದಿ ಮದನಿ ರಾಮಯ್ಯ ಚೌದ್ರಿ ರವರು ದಾವಾ ಸ್ವತ್ತಿಗೆ ಕಂದಾಯ ಕಟ್ಟಿದ್ದಾರೆ. ನಿಪಿ-15 ಮತ್ತು 16 ರ ಪ್ರಕಾರ 2008-09, 2009-10 ರಲ್ಲಿ ವಾದಿ ಮದನಿ ರಾಮಯ್ಯ ಚೌದ್ರಿ ರವರು ದಾವಾ ಸ್ವತ್ತಿಗೆ ಕಂದಾಯ ಕಟ್ಟಿದ್ದಾರೆ. ನಿಪಿ-17 ರ ಪ್ರಕಾರ ವಾದಿಗೆ ಬಿ ಬಿ ಎಂ ಪಿ ಇಲಾಖೆಯವರು ಕಂದಾಯ ತೆರಿಗೆ ಕಟ್ಟಲು ಡಿಮಾಂಡ ನೋಟಿಸ ಕಳುಹಿಸಿದ್ದಾರೆ ಎಂದರೆ ಸಾಕ್ಷಿ ನಿಪಿ-17 ನ್ನು ನೋಡಿ ಹೌದು ಎಂದು ಹೇಳುತ್ತಾರೆ. ದಾವಾ ಆಸ್ತಿಗೆ ವಾದಿ ಮದನಿ ರಾಮಯ್ಯ ಚೌದ್ರಿರವರು 2012-13,2013-14 ರಲ್ಲಿ ಕಂದಾಯ ಕಟ್ಟಿದ್ದಾರೆ, ಅದರಲ್ಲಿ ಸೈಟ ನಂಬರ ಇಲ್ಲ. ದಾವಾ ಆಸ್ತಿಗೆ ವಾದಿ ಮದನಿ ರಾಮಯ್ಯ ಚೌದ್ರಿರವರು 2016-2017 ಕ್ಕೂ ಕಂದಾಯ ಕಟ್ಟಿದ್ದಾರೆ ಎಂದರೆ ಅದರಲ್ಲಿ ಸೈಟ ನಂಬರ ತೋರಸಿಲ್ಲ. ದಾವಾ ಸ್ವತ್ತಿನಲ್ಲಿ ವಾದಿ ಮದನಿ ರಾಮಯ್ಯ ಚೌದ್ರಿರವರು ಬೋರ ತೆಗೆದ ಬಗ್ಗೆ ಬೋರವೆಲನ್ ರವರು ರಶೀದಿ ಕೊಟ್ಟಿದ್ದರು ಎಂದರೆ ಅದರಲ್ಲಿ ಸೈಟ ನಂಬರ ತೋರಸಿಲ್ಲ. ಸಾಕ್ಷಿ ಮುಂದುವರೆದು ಯಾವುದರಲ್ಲಿ ಸೈಟ ನಂಬರ ನಮೂದಿಸಿಲ್ಲ ಎಂದು ಹೇಳುತ್ತಾರೆ.

ದಿಃ02.04.2015 ರಲ್ಲಿ ವಾದಿ (ಪ್ರತಿವಾದಿ 4)ಅನೀಲಕುಮಾರವರ ಮೇಲೆ ಪೋಲಿಸ ದೂರು ಸಲ್ಲಿಸಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಪಿ-30 (ಪ್ರತಿವಾದಿ 4)ಅನೀಲಕುಮಾರವರು ಸೈಟ ನಂಬರ 42, ಸರ್ವೆ ನಂಬರ 13 ಚಿಕ್ಕಸಂದ್ರ ಎಂದು ಬರೆಸಿದ್ದಾರೆ ಅದು ದಾವಾ ಆಸ್ತಿಯ ಕಂಪೌಂಡ ಗೋಡೆಯ ಮೇಲೆ ಪೆಂಟ

ಮೂಖಾಂತರ ಬರೆದಿರುವುದು ಎಂದರೆ ಸರಿ. ದಾವಾ ಸ್ವತ್ತನ್ನು ಖರೀದಿ ಮಾಡುವ ಪೂರ್ವದಲ್ಲಿ ವಿಜಯಕುಮಾರ( ಪ್ರತಿವಾದಿ 3) ರವರು ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇವೆಯೆ ಎಂದರೆ ಇಲ್ಲ. ವಿಜಯಕುಮಾರ( ಪ್ರತಿವಾದಿ 3) ರವರ ಪೂರ್ವದಲ್ಲಿ ಅರಣಕುಮಾರ (ಪ್ರತಿವಾದಿ 5)ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇವೆಯೆ ಎಂದರೆ ಇಲ್ಲ. ಅರಣಕುಮಾರ (ಪ್ರತಿವಾದಿ 5) ಗಿಂತ (ಪ್ರತಿವಾದಿ 4) ಅನೀಲಕುಮಾರ ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇವೆಯೆ ಎಂದರೆ ಇಲ್ಲ. ಅದರ ಪೂರ್ವದಲ್ಲಿ ವಿಜೆಯೆಂದ್ರ ರಾಜು ರವರು ಸ್ವತ್ತಿನ ಸ್ವಾಧೀನದಲ್ಲಿ ಇದ್ದರು ಎಂದು ತೋರಿಸಲು ನಿಮ್ಮ ಬಳಿ ದಾಖಲೆ ಇವೆಯೆ ಎಂದರೆ ಇಲ್ಲ. ಸ್ವತ್ತಿಗೆ ನೀರಿನ ಮತ್ತು ಡ್ರೈನೇಜ ಸಂಪರ್ಕ ಇದೆ ಎಂದರೆ ಸರಿ. ಸದರಿ ನೀರು ಮತ್ತು ಡ್ರೈನೇಜ ಸಂಪರ್ಕ ನಿಪಿ-37 ರ ಪ್ರಕಾರ ವಾದಿ ಮದನಿ ರಾಮಯ್ಯ ಚೌದ್ರಿ ರವರ ಹೆಸರಿನಲ್ಲಿ ಇದೆ.

ಮುಂದುವರೆದ ಪಾಟೀ ಸವಾಲು ಮಾಡಲು ಕಾಲಾವಕಾಶ ಕೋರಿದ್ದರಿಂದ ಕಾಲಾವಕಾಶ ನೀಡಿ ಮುಂದೂಡಲಾಯಿತು.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ** ಗಣಕ ಯಂತ್ರದಲ್ಲಿ **ಬೆರಳಚ್ಚು ಮಾಡಿಸಲಾಯಿತು.)**

**ಓ.ಹೇ.ಕೇ. ಸರಿ ಇದೆ.**

**(ನಿಶಾ ರಾಣಿ ಎ. ಸಿ)**
**III ನೇ ಎ.ಸಿ.ಸಿ & ಎಸ್.ಜೆ,ಬೆಂಗಳೂರು.**